ಇ) ಸದರಿ ಕಾರ್ಖಾನೆಯು ಪೂರ್ಣ ಕಾರ್ಯಾಚರಣೆ ನಡೆಯಬೇಕಾದರೆ ೭೨.೫೮ ಲಕ್ಷ ಯೂನಿಟ್ ವಿದ್ಯುಚ್ಛಕ್ತಿ ಒದಗಿಸಿದರೆ ಸಾಧ್ಯವೆಂದುದರಿಂದ ಮೇಲ್ಕಂಡ ಯೂನಿಟ್ ವಿದ್ಯುತ್ ನೀಡಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಈ) ಸದರಿ ಕಾರ್ಖಾನೆಯು ವಿದ್ಯುತ್ ಕೊರತೆಯಿಂದ ಮುಚ್ಚುವುದರಿಂದ ೧೨೦೦ ಜನ ಕಾರ್ಮಿಕರು ಬೀದಿ ಪಾಲಾಗುವುದರಿಂದ ಹಾಲಿ ಪರವಾನಿಗೆ ಕೊಟ್ಟು ೩೦ ಪರ್ಸೆಂಟ್ ಯೂನಿಟ್ಟಿನಿಂದ ೭೦ ಪರ್ಸೆಂಟ್ ಯೂನಿಟ್‌ವರೆಗೆ ಏರಿಸಿ ಕಾರ್ಮಿಕರ ಹಿತದೃಷ್ಟಿಯಿಂದ ಸರ್ಕಾರವು ಶೀಘ್ರವಾಗಿ ಕ್ರಮ ಕೈಗೊಳ್ಳುವರೇ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಬಂದಿದೆ.

ಆ) ವಿದ್ಯುತ್ ಕಡಿತದಿಂದಲೇ ಈ ಪರಿಸ್ಥಿತಿ ಉಂಟಾಗಿದೆ ಎಂದು ಹೇಳಲಾಗುವುದಿಲ್ಲ. ಸರ್ಕಾರವು ಕ್ಯಾಪ್‌ಟೀವ್ ಜನರೇಟರ್‌ಗಳನ್ನು ಪ್ರೋತ್ಸಾಹಿಸುತ್ತಿದೆ.

ಇ) ಬೇಡಿಕೆಯ ಪೂರ್ಣ ಪ್ರಮಾಣದ ವಿದ್ಯುತ್ತನ್ನು ಸಧ್ಯಕ್ಕೆ ಪೂರೈಸಲು ಆಗುವುದಿಲ್ಲ.

ಈ) ಈ ಕಾರ್ಖಾನೆಗೆ ಶೇಕಡ ೨೦ ರಿಂದ ೨೫ ಪ್ರಮಾಣದ ಹೆಚ್ಚು ಬೆಲೆಯ ವಿದ್ಯುತ್ತನ್ನು ಕೊಡಲಾಗಿದೆ. ಕಾರ್ಖಾನೆಯು ಆಗಸ್ಟ್ ೮೬ ರಿಂದ ಅಕ್ಟೋಬರ್ ೮೬ರ ವರೆಗೆ ಅದನ್ನು ಬಳಸಿಕೊಂಡಿದೆ. ಹೆಚ್ಚು ಬೆಲೆಯ ವಿದ್ಯುತ್ತನ್ನು ಕಾರ್ಖಾನೆ ಬೇಡಿದ್ದಲ್ಲಿ ಅದನ್ನು ಸೂಕ್ತ ಪ್ರಮಾಣದಲ್ಲಿ ಪೂರೈಸಲು ಪರಿಶೀಲಿಸಲಾಗುತ್ತದೆ.

ಅರಣ್ಯ ರಕ್ಷಣಾದಳದವರು ಮಾಡಿದ ಮಂಷ್ಕರದಿಂದ ಬೊಕ್ಕಸಕ್ಕೆ ಉಂಟಾದ ನಷ್ಟದ ಬಗ್ಗೆ

೧೯೧(೨೪೨) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ಅರಣ್ಯ, ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಅರಣ್ಯ ರಕ್ಷಣಾದಳದವರು ತಾ : ೨೫-೧೨-೮೬ ರಿಂದ ತಾ : ೪-೧-೮೭ರವರೆಗೆ ಮಾಡಿದ ಮುಷ್ಕರದಿಂದ ರಾಜ್ಯದ ಬೊಕ್ಕಸಕ್ಕೆ ಉಂಟಾದ ನಷ್ಟ ಎಷ್ಟು ? ಈ ದಿಸೆಯಲ್ಲಿ ರಾಜ್ಯ ಸರ್ಕಾರದವರು ಅಂಕಿ ಅಂಶಗಳ ಸಂಗ್ರಹಣೆ ಮಾಡಿದ್ದಾರೆಯೆ ?

ಆ) ತಾ : ೬-೧-೮೭ ರಂದು ಕರ್ನಾಟಕ ರಾಜ್ಯದ ಅರಣ್ಯ ರಕ್ಷಣಾ ದಳದ ಸಿಬ್ಬಂದಿಗಳು ಬೆಂಗಳೂರಿನಲ್ಲಿ ಮುಷ್ಕರ ಹೂಡಿದಾಗ ಮಾನ್ಯ ಮುಖ್ಯ ಮಂತ್ರಿಗಳು ೩ ತಿಂಗಳಲ್ಲಿ ಎಲ್ಲಾ ಬೇಡಿಕೆಗಳನ್ನು ಈಡೇರಿಸುವುದಾಗಿ ನೀಡಿದ ಭರವಸೆಯ ಬಗ್ಗೆ ಸರಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು).—

ಅ) ಅರಣ್ಯ ರಕ್ಷಣಾದಳದವರು ತಾ : ೨೫-೧೨-೮೬ ರಿಂದ ತಾ : ೪-೧-೮೭ರವರೆಗೆ ಮಾಡಿದ ಮುಷ್ಕರದಿಂದ ರಾಜ್ಯದ ಬೊಕ್ಕಸಕ್ಕೆ ಉಂಟಾದ ನಷ್ಟ ಸುಮಾರು ರೂ.೧೩,೮೫,೧೨೭-೫೦ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಯವರಿಂದ ವರದಿ ತರಿಸಲಾಗಿದೆ.

ಆ) ತಾ : ೬-೧-೮೭ ರಂದು ಕರ್ನಾಟಕ ರಾಜ್ಯದ ಅರಣ್ಯ ರಕ್ಷಣಾ ದಳದ ಸಿಬ್ಬಂದಿಯವರು ಬೆಂಗಳೂರಿನಲ್ಲಿ ಮುಷ್ಕರ ಹೂಡಿದ್ದಾಗ ಮಾನ್ಯ ಮುಖ್ಯ ಮಂತ್ರಿಗಳು ಸಿಬ್ಬಂದಿಗಳ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ತಿಳಿಸಿದ್ದಾರೆ. ಪ್ರಮುಖ ಬೇಡಿಕೆಗಳು ವಿವಿದ ಹಂತಗಳಲ್ಲಿ ಸರಕಾರದ ಪರಿಶೀಲನೆಯಲ್ಲಿದೆ. ಕೆಲವು ಬೇಡಿಕೆಗಳನ್ನು ಈಡೇರಿಸಿದೆ. ಇತರ ಬೇಡಿಕೆಗಳು ಸರ್ಕಾರದ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿರುವ ಮೇದಾರ ಕುಂಬಾರ ಬಡಿಗ ಮತ್ತು ಕಮ್ಮಾರರ ಬಗ್ಗೆ

೧೯೩(ಳಓ೭) ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ).—ಮಾನ್ಯ ವಾಣಿಜ್ಯ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ರಾಜ್ಯದಲ್ಲಿರುವ ಮೇದಾರ, ಕುಂಬಾರ, ಬಡಿಗ ಮತ್ತು ಕಮ್ಮಾರ ಈ ಎಲ್ಲಾ ಕುಟುಂಬಗಳ ಸಂಖ್ಯೆ ಎಷ್ಟು (ಪ್ರತ್ಯೇಕವಾದ ವಿವರಗಳನ್ನು ಕೊಡುವುದು)

ಆ) ಇವರಿಗೆ ಈ ಕಸುಬಿನಲ್ಲಿ ಮುಂದುವರೆಯಲು ಸರ್ಕಾರದವರು ಯಾವ ರೀತಿಯ ಸಹಾಯವನ್ನು ಮಾಡುತ್ತಿದ್ದಾರೆ?

ಇ) ಅವರಿಗೆ ಬಿದಿರು, ಕಟ್ಟಿಗೆ ಮತ್ತು ಕಬ್ಬಿಣ ಇತ್ಯಾದಿ ಕಚ್ಚಾವಸ್ತುಗಳನ್ನು ಸಮರ್ಪಕವಾದ ರೀತಿಯಲ್ಲಿ ಒದಗಿಸಲಾಗುತ್ತಿದೆಯೆ ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ಯೋಜನೆಯ ಅಲಾಖೆಯ ಕಸಬುದಾರರ ಸಮೀಕ್ಷೆಯಂತೆ ರಾಜ್ಯದಲ್ಲಿ ೧೮,೩೯೪ ಬೆತ್ತದ ಕಸಬುದಾರರು ೨೨,೮೪೪ ಕುಂಬಾರರು ೩೩,೯೦೬ ಬಡಿಗತನದ ಕೆಲಸಗಾರರು ಹಾಗೂ ೨೭,೧೨೫ ಕಮ್ಮಾರಿಕೆ ಕಸಬುದಾರರು ಇರುವರು.

ಆ) ಕೈಗಾರಿಕಾ ಇಲಾಖೆಯ ಪತಿಯಿಂದ ಕುಶಲ ಕರ್ಮಿಗಳು ತಮ್ಮ ವೃತ್ತಿಯಲ್ಲಿ ಅಭಿವೃದ್ಧಿ ಹೊಂದಲು ಕೊಡುತ್ತಿರುವ ಸಹಾಯದ ರೀತಿಗಳು:—

೧) ವೃತ್ತಿಯಲ್ಲಿ ತರಬೇತಿ
೨) ಸಲಕರಣೆಗಳ ಪರಬರಾಜು
೩) ಪರತಿ ಕಾರ್ಯಾಗಾರ
೪) ಮುರುಕಟ್ಟೆ
೫) ಹಣಕಾಸು

ಇದಲ್ಲದೆ–ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ಶೇಕಡ ೪ ರಂತೆ ಬಡ್ಡಿ ದರದ ಮೇಲೆ ಸಹಕಾರಿ ಸಂಘಗಳಿಗೆ, ಹಾಗೂ ವಯುಕ್ತಿಕ ಕಸಬುದಾರರಿಗೆ ಧನಸಹಾಯವನ್ನು ಮಾಡುತ್ತಿದೆ.

ಇ) ಕುಶಲ ಕರ್ಮಿಗಳಿಗೆ ತಮ್ಮ ಕಸುಬಿನಲ್ಲಿ ನಿರತರಾಗಲು ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾಭಿವೃದ್ಧಿ ನಿಗಮದಿಂದ ಕಚ್ಚಾಣವನ್ನು ಮತ್ತು ಪರಣ್ಯ ಇಲಾಖೆಯವರು ಬಿದಿರು ಮತ್ತು ಮರವನ್ನು ನೀಡುತ್ತಿದ್ದಾರೆ.

ಪಶುವೈದ್ಯ ಆಸ್ಪತ್ರೆಯನ್ನು ತೆರೆಯುವ ಬಗ್ಗೆ

೧೯೪ (ಪಿಪಿಡಿ) ಶ್ರೀ ಪಿ. ಸಿ. ಸಿದ್ದನಗೌಡ (ಕಲಘಟಗಿ).—ಮಾನ್ಯ ರೇಷ್ಮೆ, ಪಶು ಸಂಗೋಪನೆ ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕಲಘಟಗಿ ಕ್ಷೇತ್ರವು ಹೆಚ್ಚಾಗಿ ಅರಣ್ಯ ಪ್ರದೇಶವಾಗಿದ್ದು, ಅಲ್ಲಿ ಪಶುವೈದ್ಯಕೀಯ ಆಸ್ಪತ್ರೆಯ ಅವಶ್ಯಕತೆ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಸದರಿ ಆಸ್ಪತ್ರೆಯನ್ನು ತೆರೆಯುವುದರಿಂದ ನೂಲ್ವಿ ಗ್ರಾಮದ ಸುತ್ತಮುತ್ತಲಿರುವ ೬–೭ ಹಳ್ಳಿಗಳ ರೈತರಿಗೆ ಪ್ರಯೋಜನವಾಗುತ್ತದೆ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು).—

ಅ) ಬಂದಿದೆ.

ಆ) ಈಗಾಗಲೇ ಇಲ್ಲಿ ಕೃತಕ ಗರ್ಭಧಾರಣಾ ಕೇಂದ್ರವಿದ್ದು, ಇದರ ಪ್ರಯೋಜನವನ್ನು ನೂಲ್ವಿ ಗ್ರಾಮದ ಸುತ್ತಮುತ್ತಲ ಗ್ರಾಮದ ರೈತರು ಪಡೆಯುತ್ತಿದ್ದಾರೆ.

ಸಭೆಯಲ್ಲಿ ಮಂಡಿಸಲಾದ ಕಾಗದ ಪತ್ರಗಳು

ಅಧ್ಯಕ್ಷರು.—ಮಾನ್ಯ ಸಚಿವರು ಸಭೆಯ ಮುಂದೆ ಕಾಗದಪತ್ರಗಳನ್ನು ಮಂಡಿಸುವುದು.

ಶ್ರೀ ವೀರಣ್ಣ (ಮಾನ್ಯ ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನ ಮುಂದೆ ಇರುವ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಶ್ರೀ ವೀರಣ್ಣ (ಮಾನ್ಯ ಸಾರಿಗೆ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಶ್ರೀ ನಜೀರ್‌ಸಾಬ್ ರವರ ಹೆಸರಿನ ಮುಂದೆ ಇರುವ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಅರ್ಜಿಗಳನ್ನೊಪ್ಪಿಸುವುದು

ಅಧ್ಯಕ್ಷರು.—ಶ್ರೀ ಕುಶಾಲ ಆವರು ಅರ್ಜಿಗಳನ್ನು ಒಪ್ಪಿಸುವುದು.

ಶ್ರೀ ಕೆ. ಕುಶಾಲ.—ಅರ್ಜಿ ಸಮಿತಿಗೆ ಸಂಬಂಧಪಟ್ಟ ಆರು ಮನವಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.